ಆತನನ್ನು ಹಿಡಿದ ಪೊಲೀಸ್ ಅಧಿಕಾರಿಯ ಅಭಿಪ್ರಾಯ, ಮುಸುಕು ಹಾಕಿಕೊಂಡ ಹೆಂಗಸರ ಚಿತ್ರಗಳು ಮುಖಕ್ಕೆ ರಾಚುತ್ತಿದ್ದವು. ಹಾಗಾದರೆ ಇಂದು ನ್ಯೂಸ್ ಚಾನೆಲ್‌ಗಳಿಗೆ ಹಬ್ಬ ಎಂದುಕೊಳ್ಳುತ್ತ ಆರಾಧ್ಯ ಮಲಗಿದ್ದ ಕಡೆಗೆ ಓಡಿ ಹೋಗಿ 'ನಿನ್ನ ಎಂಜಿನಿಯರಿಂಗ್ ಕಾಲೇಜ್ ಫ್ರೆಂಡ್ ಬಶೀರನನ್ನು ಪೊಲೀಸರು ಒಳಗೆ ಹಾಕಿದ್ದಾರೆ... ನೋಡು... ಫೋಟೊ ಬಂದಿದೆ' ಎಂದ. ಅದನ್ನು ಕೇಳಿದ ಆರಾಧ್ಯ ಒಮ್ಮೆಲೇ ಎದ್ದು ಕುಂತ. ದೇಹದಲ್ಲಿ ರಕ್ತ ಸಂಚಾರ ಜೋರಾಗಿದ್ದರಿಂದ ಸೊಳ್ಳೆ ನನ್ನ ಹತ್ತಿರವೇ ಹೆಚ್ಚು ಬರಬಹುದೆಂದು ಚಾದರವನ್ನು ಕಾಲಿಗೆ ಪೂರ್ತಿ ಮುಚ್ಚಿಕೊಳ್ಳುತ್ತಾ ಅಣ್ಣನಿಂದ ಪತ್ರಿಕೆಯನ್ನು ತೆಗೆದುಕೊಂಡು ಎರಡನೇ ಪುಟ ತೆರೆದ.

ಬಶೀರ ಲೋಕಲ್ ರೌಡಿಗಳ ವೀರಗಾಥೆಗಳನ್ನು ಪತ್ರಿಕೆಯಲ್ಲಿ ಬರುವಂತೆ ಮಾಡಿ, ನಿಮ್ಮನ್ನೆಲ್ಲ ಜನರ ಮನಸ್ಸಲ್ಲಿ ಹೀರೊ ಮಾಡುತ್ತೇನೆಂದು ನಂಬಿಸಿ ಅವರಿಂದ ಹಣ ತೆಗೆದುಕೊಳ್ಳುತ್ತಿದ್ದನಂತೆ. ರೌಡಿಗಳ ಮೂಲಕವೇ ಸಣ್ಣ ಪುಟ್ಟ ಸೂಳೆಯರನ್ನು ಬುಟ್ಟಿಗೆ ಕೆಡವಿ ಅವರಿಂದ ರಾಜಕಾರಣಿಗಳ ಮೊಬೈಲ್ ನಂಬರ್ ತೆಗೆದುಕೊಂಡು, ನಿಮ್ಮ ಸಂಬಂಧವನ್ನು ಪತ್ರಿಕೆಯಲ್ಲಿ ಹರಾಜು ಹಾಕುತ್ತೇನೆಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದನಂತೆ. ಹೀಗೆಲ್ಲ ಮಾಡಿದರೆ ಕಾನೂನಿನ ಪ್ರಕಾರ ಹೇಗೆ ತಪ್ಪು ಎನ್ನುವುದು ಏನು ಮಾಡಿದರೂ ಆರಾಧ್ಯನಿಗೆ ಅರ್ಥವಾಗಲಿಲ್ಲ. ಈ ವೃತ್ತಾಂತದ ಸಾರಾಂಶವು ತನಿಖಾ ಅಧಿಕಾರಿಯ ಅಭಿಪ್ರಾಯವಾಗಿ ಪ್ರಕಟವಾಗಿ ಆತನ ಕುಖ್ಯಾತಿಯನ್ನು ಬಿಂಬಿಸುತ್ತಿತ್ತೇ ಹೊರತು ನಿನ್ನೆ ಸ್ಟೇಶನ್ನಿಗೆ ಆತನನ್ನು ತಳ್ಳಿದ ಕಾರಣವನ್ನು ಸ್ಪಷ್ಟಪಡಿಸಿರಲಿಲ್ಲ. ರೌಡಿ– ಸೂಳೆ –ರಾಜಕಾರಣಿ– ಟ್ಯಾಬ್ಲಾಯ್ಡ್ ತಲೆಹಿಡುಕರ ಈ ಆಹಾರ ಸರಪಳಿಯಲ್ಲಿ ಅವರನ್ನು ಬಿಟ್ಟು ಇವರ್‌ಯಾರು ಎಂದು ಕಣ್ಣು ಕಟ್ಟುವ ಆಟ ಪತ್ರಿಕೆಯ ಆ ಪುಟದ ತುಂಬ ತುಂಬಿದಂತಾಗಿತ್ತು. ಈ ಸರಪಳಿಯಲ್ಲಿ ಬಶೀರನ ಕೊಂಡಿ ಯಾವುದು ಮತ್ತು ಈ ಎಲ್ಲ ಕೊಂಡಿಯ ಎರಕದಲ್ಲಿ ಬಶೀರ ಇರಬಹುದು ಎಂದೂ ಅಂದುಕೊಳ್ಳುವ ಹಾಗಿತ್ತು. ಹೆಚ್ಚಾಗಿ ಬಶೀರನ ಬಹಳಷ್ಟು ಹಳೆಯ ಕೇಸುಗಳು ಓಪನ್ ಇರಬೇಕು. ಎಲ್ಲದಕ್ಕೂ ಉತ್ತರವಾಗಿ ನಿನ್ನೆ ಆತನನ್ನು ಸಿಕ್ಕಿಸಿರಬೇಕು... ಎಂದುಕೊಳ್ಳುತ್ತಾ ಆಫೀಸಿಗೆ ಹೊತ್ತಾಯಿತೆಂದು ಸ್ನಾನಕ್ಕೆ ಹೊರಟುಬಿಟ್ಟ. ಗೀಜರ್ ನೀರು ಅಷ್ಟು ಬಿಸಿ ಇರಲಿಲ್ಲ. ಆದರೂ ಸುರಿದುಕೊಳ್ಳುತ್ತಲೇ ಇದ್ದ ಆರಾಧ್ಯನಿಗೆ ಬಶೀರ ತಲೆಯಿಂದ ಹೋಗಲೇ ಇಲ್ಲ. ನೀರಿನಷ್ಟು ಸುಲಭವಾಗಿ ಬಶೀರ ಹರಿದು ಹೋಗಬೇಕಲ್ಲ...

ಬಶೀರನ ಈ ಘಟನೆಯನ್ನು ಓದಿದ ನಂತರ, ಬಿಡಿ ಬಾಳೆಹಣ್ಣುಗಳನ್ನು ಮಾರುವ ಬಡ ಅಜ್ಜಿಯಲ್ಲೂ ಹತ್ತು ರೂಪಾಯಿ ಲಂಚ ಕೇಳುವ ಪೊಲೀಸನ ಮೇಲೆ ಇಂದು ಆರಾಧ್ಯನಿಗೆ ಗೌರವ ಬಂದಿತ್ತು.

ಆರಾಧ್ಯ ಮತ್ತು ಬಶೀರ ಒಂದೇ ಕಾಲೇಜಿನಲ್ಲಿ ಕಲಿಯುತ್ತಿದ್ದರು. ಆ ದಿನ, ಅಂದರೆ ಆರಾಧ್ಯ ಪೂರ್ಣ ಹೆದರಿದ ಆ ದಿನ ನೆನಪಾಗಿ ಎಂದಿನಂತೆ ಆತನಿಗೆ ನಿಶ್ಚಿಂತೆಯಿಂದ ಸ್ನಾನ ಮಾಡಲಾಗಲಿಲ್ಲ. ಹೆದರಿದ ಆ ದಿನ ಮುಗಿದು ಹದಿನೈದು ವರುಷವಾದರೂ ಆ ಹೆದರಿಕೆ ಕಡಿಮೆಯಾಗಿರಲಿಲ್ಲ. ಬಶೀರ ಒಮ್ಮೊಮ್ಮೆ ಕಾಲೇಜಿನ ವಿದ್ಯಾರ್ಥಿಗಳು, ಮುಖ್ಯವಾಗಿ ಈಗಷ್ಟೇ ಕಾಲೇಜು ಸೇರಿದವರು ಒಟ್ಟಾದಾಗ ಅಥವಾ ಊಟಕ್ಕೆ ಎಲ್ಲರೂ ಮೆಸ್‌ನಲ್ಲಿ ಕೂತಾಗ ಯಾವುದಾದರೂ ಅತರಂಗಿ ವಿಷಯ ಬಂದರೆ ದೊಡ್ಡ ಪ್ರವಾದಿಯ ಹಾಗೆ ಮಾತನಾಡುತ್ತಿದ್ದ. ಮಾತನಾಡಲು ಪ್ರಾರಂಭಿಸುತ್ತಿದ್ದಂತೆ ವಿದ್ಯಾರ್ಥಿಗಳು ಬಂದು ಸೇರುತ್ತಿದ್ದರು. ಆಗ ಆತನ ಮುಖ ಹೊಳೆಯುತ್ತಿತ್ತು. ಮಾತು ಹೆಚ್ಚು ಹೊತ್ತಾದರೆ ಜ್ಯೂನಿಯರ್ ಯಾರಾದರೂ ಅನ್ನಕ್ಕೆ ಸಾಂಬಾರು ಸುರಿದು ಪಲ್ಯ ಸ್ವಲ್ಪ ಹೆಚ್ಚೇ ಹಾಕಿಕೊಂಡು ಅಲ್ಲೇ ಕೈಯಲ್ಲಿ ಹಿಡಿಸುತ್ತಿದ್ದರು. ಕೆಲವರು ಅರ್ಧ ಚಹ ಮತ್ತು ಬನ್ನು, ಕುಲ್ಫಿಯನ್ನೂ ತಂದುಕೊಟ್ಟಿದ್ದಿದೆ.